## ನಿವೇದನೆ

# ನಮ್ಮ ಕನಸಿಗೆ ಮಕ್ಕಳ ನೊಗ

**ಕನಸು ಕಂಗಳಲ್ಲೀಗ ನಿದ್ದೆಗೆಟ್ಟು ಓದುವ ಚಿಂತೆ. ಪಠ್ಯಕ್ರಮ, ಸ್ಪರ್ಧಾತ್ಮಕ ಪರೀಕ್ಷೆ, ರ‍್ಯಾಂಕು, ಪ್ರವೇಶ, ವಿಜ್ಞಾನವೋ, ಕಲೆಯೋ, ವೃತ್ತಿಪರ ಕೋರ್ಸ್‌ಗಳೋ ಮಕ್ಕಳ ಮುಂದೆ ಕವಲೊಡೆದ ದಾರಿಗಳಿದ್ದಾಗ ಹದಿಹರೆಯದವರಲ್ಲಿ ಗೊಂದಲ ಸಹಜ. ದಾರಿದೊಂದಿಗಳಾಗಿ ಬೆಳಕ ಬೀರಬೇಕಿರುವುದು ನಮ್ಮೆಲ್ಲರ ಕರ್ತವ್ಯ.**




ವಿಜಯ

ಹೊಸ ವರುಷದ ಹರುಷದೊಂದಿಗೆ ಹದಿಹರೆಯದ ಮಕ್ಕಳಲ್ಲಿ ಪರೀಕ್ಷಾ ಆತಂಕ ಶುರುವಾಗಿದೆ. ದಿನಗಣನೆ ಮಾಡುತ್ತಲೇ, ಯಾವ ವಿಷಯಕ್ಕೆ ಎಷ್ಟು ಕ್ಷಣ ಎಂಬ ವೇಳಾಪಟ್ಟಿಯನ್ನಿಟ್ಟುಕೊಂಡು ಓದುವ, ಬರೆಯುವ, ಅಭ್ಯಾಸ ಮಾಡುವ ಮಕ್ಕಳು ನಮ್ಮ ನಿಮ್ಮ ಸುತ್ತಲಿದ್ದಾರೆ.

ಆಗಾಗ, ಇದೇ ಬದುಕಿನ ತಿರುವಿನ ಸಮಯ. ಈ ವರ್ಷ ಕಷ್ಟ ಪಟ್ಟು ಓದಿದರೆ ಮಾತ್ರ ಮುಂದಿನ ಜೀವನ ತೀರ್ಮಾನವಾಗುವುದು ಎಂಬಂಥ ಮಾತುಗಳು ಮನೆಮನೆಯಲ್ಲಿಯೂ ಕೇಳಿಬರುತ್ತವೆ. ಜೊತೆಗೆ ನಮ್ಮ ಕಾಲದಲ್ಲಿ ಎಂದು ಕತೆ ಆರಂಭವಾದರೆ ಮಕ್ಕಳಿಗೆ ಆಕಳಿಕೆ ಬರುವವರೆಗೂ ಹೇಳಿಕೊಳ್ಳುವುದು ಹೆತ್ತವರ ಕರ್ತವ್ಯವೆಂಬಂತೆ ಮಕ್ಕಳಿಗೆ ಉಪದೇಶ ನೀಡುತ್ತಿರುತ್ತೇವೆ. ಓದದಿದ್ದರೆ, ಅಂಕ ಗಳಿಸದಿದ್ದರೆ, ಕಾಲೇಜಿಗೆ ಪ್ರವೇಶ ಸಿಗದಿದ್ದರೆ ಎಂಬಂಥ ರೆ ಗಳ ಬೆಟ್ಟದ ಹೊರೆಯಲ್ಲಿರುವ ಪಾಲಕರು ಆತಂಕದ ಭಾರವನ್ನು ಮಕ್ಕಳಿಗೂ ಜಾರಿಸುತ್ತಾರೆ.

ಯಾರು ಎಷ್ಟು ಅಂಕ ತೆಗೆಯಬಲ್ಲರು, ಬ್ಯಾಂಕುಗಳ ಸಾಲ, ಎಲ್ಲಿ ಪ್ರವೇಶ, ಎಷ್ಟು ವಿದ್ಯಾರ್ಥಿವೇತನ ದೊರೆಯಬಹುದು ಇಂಥ ಲೆಕ್ಕಾಚಾರ ಪೋಷಕರದ್ದು. ಬಹುತೇಕ ಮಕ್ಕಳಿಗೆ ಅವರ ಕನಸುಗಳೇನು? ಅವರ ಆಸಕ್ತಿ ಏನು ಎಂದು ಕೇಳುವ ಮೊದಲೇ ನಮ್ಮ ಕನಸುಗಳನ್ನು ಅವರ ಭುಜಕ್ಕೆ ದಾಟಿಸಿರುತ್ತೇವೆ. ಅಂಕ ಗಳಿಕೆಯ ಭಾರದೊಂದಿಗೆ ಅಪ್ಪ ಅಮ್ಮನ ನಿರೀಕ್ಷೆಗಳನ್ನೂ ಹೊತ್ತು ಈ ಮಕ್ಕಳು ಒತ್ತಡವನ್ನು ಆಹ್ವಾನಿಸಿಕೊಳ್ಳುತ್ತಾರೆ. ಮಕ್ಕಳಲ್ಲಿಯ ಖಿನ್ನತೆ, ಒತ್ತಡಗಳಿಗೆ ಹೆತ್ತವರ ನಿರೀಕ್ಷೆ, ಕನಸುಗಳೂ ನೀರೆರೆಯುತ್ತಲೇ ಇರುತ್ತವೆ.

ಈ ಪರೀಕ್ಷಾಪೂರ್ವ ಸಮಯದಲ್ಲಿಯೇ ಮಕ್ಕಳಿಗೆ ಕೆರಿಯರ್ ಗೈಡೆನ್ಸ್ ಮಾಡಿಸಿ, ಅವರ ಒಲವು ನಿಲುವುಗಳನ್ನು ಅವರ ಸಾಮರ್ಥ್ಯವನ್ನೂ, ಅವರ ಜಾಣ್ಮೆಯನ್ನೂ ಅರಿತುಕೊಂಡರೆ ಪೋಷಕರಿಗೂ, ಮಕ್ಕಳಿಗೂ ಭವಿಷ್ಯದ ಹಾದಿ ಹೂಹಾದಿಯಾಗಬಲ್ಲದು. ಪ್ರಯತ್ನ ಮತ್ತು ಪರಿಶ್ರಮ ಎಂಬ ಎರಡು ಪದಗಳನ್ನು ಸವಕಲಾಗಿಸುವಷ್ಟು ಉಪದೇಶ ನೀಡಿ ಮಕ್ಕಳಲ್ಲಿ ಕಲಿಕೆಯ ಬಗೆಗಿನ ಕುತೂಹಲವನ್ನೇ ಕೊಂದು ಹಾಕುತ್ತಿದ್ದೇವೆ.

ಅಂಕ ಗಳಿಕೆ, ಸೀಟು ಗಳಿಕೆಯೇ ಶಿಕ್ಷಣದ ಉದ್ದೇಶ ಎಂಬಂತೆ, ಶಾಲೆಗಳಿಗೆ ಕೊಡುವ ಶುಲ್ಕ ಬಂಡವಾಳದಂತೆ ಬದಲಾಗಿದೆ. ಮಕ್ಕಳನ್ನು ಕಾರ್ಮಿಕರಾಗಿ ಬೆಳೆಸುವತ್ತ ನಮ್ಮ ಚಿತ್ತ ನೆಟ್ಟಿದ್ದೇವೆ. ಸದಾ ಓಟದ ಸ್ಪರ್ಧೆಯಲ್ಲಿದ್ದಂತೆ, ಗೆಲುವಿನ ದಾರಿಯೆಂಬ ಮರೀಚಿಕೆಯ ಹಿಂದೆ ಓಡುತ್ತಲೇ ಇರುತ್ತೇವೆ.

ಕನುಸಗಳಿಲ್ಲದ ದಾರಿಯಲ್ಲಿ ನಡೆಯುವುದೆಂದರೆ ಹೆಣಭಾರ ಹೊತ್ತಂತೆ ನಡೆಯುವುದೇ ಆಗಿರುತ್ತದೆ. ಉನ್ನತ ಅಧ್ಯಯನ ಮಾಡುವವರಲ್ಲಿ ತಮ್ಮ ಸಂಶೋಧನೆಯು ಅನ್ನದ ಹಾದಿಯಾಗಿಯೂ ಆನಂದದ ಹಾದಿಯಾಗಿಯೂ ಕಂಡರೆ ಮಾತ್ರ ಕನಸುಗಳ ಬೆನ್ನಟ್ಟಬಹುದು. ಓದು ಮತ್ತು ಗುರಿಗಳತ್ತ ಧಾವಿಸುವಾಗ ಶಿಕ್ಷಣ ಮತ್ತು ಜೀವನದ ಉದ್ದೇಶ ಮರೆಯುತ್ತಿದ್ದಾರೆ.

ಓದಿಗಾಗಿಯೂ ಮನರಂಜನೆಗಾಗಿಯೂ ಸದಾ ಸ್ಕ್ರೀನ್ ಮೇಲೆ ಕಣ್ಣು ನೆಡುವ ಮಕ್ಕಳು ಕಣ್ಣೆವೆಯನ್ನು ಮುಚ್ಚುವುದೇ ಮರೆಯುತ್ತಿದ್ದಾರೆ. ನಿದ್ರಿಸಿ ಕನಸು ಕಾಣುವುದೂ, ಕಂಡ ಕನಸಿಗೆ ನಿದ್ದೆಗೆಡುವುದು ಎರಡೂ ಗೊತ್ತಿರದಂತಾಗಿದೆ.

ಇದೀಗ ಸಂಕ್ರಮಣ ಕಾಲ. ಮಕ್ಕಳ ಭವಿಷ್ಯ ಮತ್ತು ವರ್ತಮಾನ ಎರಡೂ ಸುರಕ್ಷಿತವಾಗಿರುವಂತೆ ನೋಡಿಕೊಳ್ಳಬೇಕಾದ ಕಾಲ. ಮಕ್ಕಳ ಆಸಕ್ತಿ, ಅಭಿರುಚಿಗೆ ತಕ್ಕಂತಹ ಶೈಕ್ಷಣಿಕ ಕೋರ್ಸ್‌ಗಳ ಆಯ್ಕೆಗೆ ಸಹಾಯ ಮಾಡಿ. ಸೇವೆಯೇ ಮಹತ್ವಾಕಾಂಕ್ಷೆಯಾಗಿ ಬದಲಾಗುವಂಥ ಶಿಕ್ಷಣವನ್ನು ಮಕ್ಕಳು ಪಡೆಯುವಂತಾಗಲಿ.

ಮಕ್ಕಳ ಕನಸುಗಳು ಕೇವಲ ನೌಕರಿಗಾಗಿ ಸೀಮಿತಗೊಳಿಸದೆ, ಮಾನವ ಕುಲದ ಉದ್ಧಾರಕ್ಕಾಗಿ ಎಂಬಂತೆ ಅವರ ಕ್ಷಿತಿಜವನ್ನು ವಿಸ್ತರಿಸಬೇಕಾದ ಕಾಲ. ಆಗ ಮಾತ್ರ ಸಂಶೋಧನೆಯೆಡೆ, ಮೂಲ ವಿಜ್ಞಾನದ ಕಡೆ, ಕಲೆ, ಮಾನವಾಸಕ್ತಿಯ ವಿಷಯಗಳೆಡೆ ಮಕ್ಕಳು ಗಮನಹರಿಸುತ್ತಾರೆ. ತಾವೆಲ್ಲರೂ ಸಮರ್ಥರು, ತಮ್ಮ ಆಯ್ಕೆಗಳು ಬೇರೆ ಎಂಬ ವಿಶ್ವಾಸ ಮೂಡಿಸಿಕೊಳ್ಳುತ್ತಾರೆ.

ಈ ನಿಟ್ಟಿನಲ್ಲಿ ಮುಂದುವರಿಯಲು ಮೊದಲು ಪಾಲಕರಿಗೂ, ಶಿಕ್ಷಕರಿಗೂ, ಶೈಕ್ಷಣಿಕ ಸಂಸ್ಥೆಗಳಿಗೂ ಬದಲಾವಣೆಯ ಗಾಳಿ ಬೀಸಬೇಕಾಗಿದೆ. ತಮ್ಮಲ್ಲಿ ಓದಿದ ಮಕ್ಕಳ ವಾರ್ಷಿಕ ಸಂಬಳ, ನೌಕರಿದಾತರ ವಿವರಗಳಷ್ಟೇ ಮುಖ್ಯವಾಗಬಾರದು. ತಮ್ಮ ಸಂಸ್ಥೆಗಳಲ್ಲಿ ಓದಿದ ಮಕ್ಕಳಲ್ಲಿ ಮಾನವೀಯತೆ ಮತ್ತು ವಿಶ್ವಮಾನವರಾಗುವ ಗುಣ ಬೆಳೆಸಿದ್ದೇವೆ ಎಂಬುದನ್ನು ಹೆಗ್ಗಳಿಕೆಯಂತೆ ಹೇಳಿಕೊಳ್ಳಬೇಕು. ಅಂಥದ್ದು ಮಾತ್ರ ಶಿಕ್ಷಣವೆನಿಸಿಕೊಳ್ಳುತ್ತದೆ. ಅಂಕ, ಉದ್ಯೋಗ, ಹಣ ಗಳಿಕೆ ಇವೆಲ್ಲಕ್ಕೂ ಸಜ್ಜು ಮಾಡುವುದು ತರಬೇತಿಯಾಗುತ್ತದೆಯೇ ವಿನಾ ಶಿಕ್ಷಣವಾಗುವುದಿಲ್ಲ. ನಿರ್ಧಾರ ನಮ್ಮ ಕೈಯಲ್ಲಿದೆ.

ಮಕ್ಕಳನ್ನು ಶಿಕ್ಷಿತರಾಗಿಸಬೇಕೆ ಅಥವಾ ತರಬೇತುಗೊಳಿಸಬೇಕೆ? ಇವೆರಡೂ ಒಟ್ಟೊಟ್ಟಿಗೆ ಆಗಬೇಕೆ ಎಂಬುದು. ಶಿಕ್ಷಣ ಮತ್ತು ತರಬೇತಿ ಎರಡೂ ಆದಾಗ ಮಾತ್ರ ಅರಿವು–ಅನುಭೂತಿ ಎರಡನ್ನೂ ಒಟ್ಟೊಟ್ಟಿಗೆ ನೀಡಿದಂತಾಗುತ್ತದೆ. ಆ ಕಡೆ ಹೆತ್ತವರು ಮತ್ತು ಶಿಕ್ಷಕರು ಒಲವು ತೋರಬೇಕಿದೆ.

**■ ರಶ್ಮಿ ಎಸ್**